ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ವಿಧವೆಯ ವಿವಾಹವಾದರೆ ಮಧ್ಯ ಪ್ರದೇಶ ಸರ್ಕಾರದಿಂದ 2 ಲಕ್ಷ ರೂ.

ಮಧ್ಯ ಪ್ರದೇಶ ಸರ್ಕಾರ ನೂತನ ಯೋಜನೆಯೊಂದನ್ನು ಜಾರಿಗೆ ತಂದಿದ್ದು, ಈ ಯೋಜನೆ ಅನ್ವಯ ವಿಧವೆಯರನ್ನು ಮದುವೆಯಾಗುವವರಿಗೆ ರಾಜ್ಯ ಸರ್ಕಾರ 2 ಲಕ್ಷ ರೂ.ಗಳನ್ನು ಉಡುಗೊರೆಯಾಗಿ ನೀಡಲಿದೆ. ಮಧ್ಯ ಪ್ರದೇಶದಲ್ಲಿ ವಿಧವಾ ವಿವಾಹವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಶಿವರಾಜ್ ಸಿಂಗ್ ಚೌಹ್ವಾಣ್ ನೇತೃತ್ವದ ಸರ್ಕಾರ ಈ ಯೋಜನೆ ಘೋಷಣೆ ಮಾಡಿದೆ.

ಅಗತ್ಯ ಬಿದ್ದರೆ ತಕ್ಷಣವೇ ಭಾರತೀಯ ವಾಯುಪಡೆ ಯುದ್ಧಕ್ಕೆ ಸನ್ನದ್ಧ

ಅಗತ್ಯ ಬಿದ್ದರೆ ಭಾರತೀಯ ವಾಯುಪಡೆ ಅಲ್ಪಾವಧಿಯಲ್ಲಿಯೇ ಯುದ್ಧ ಮಾಡಲು ಸಂಪೂರ್ಣ ಸಜ್ಜಾಗಿದೆ ಎಂದು ಏರ್ ಚೀಫ್ ಮಾರ್ಷಲ್ ಬಿ.ಎಸ್.ಧನೋವಾ ತಿಳಿಸಿದ್ದಾರೆ. ಭಾರತೀಯ ವಾಯುಪಡೆ ಬಹು ಆಯಾಮದ ಕಾರ್ಯತಂತ್ರದ ಸಾಮರ್ಥ್ಯಗಳನ್ನು ಪಡೆದುಕೊಳ್ಳಲು ಮತ್ತು ಭೂ ಸೇನೆ ಮತ್ತು ನೌಕಾಪಡೆಯೊಂದಿಗೆ ಜಂಟಿಯಾಗಿ ಕೆಲಸ ಮಾಡಲು ಸಿದ್ಧವಾಗಿದೆ ಎಂದು ಹೇಳಿದ್ದಾರೆ.

'ಸಿದ್ದರಾಮಯ್ಯನವರನ್ನು ಸೋಲಿಸದಿದ್ದರೆ ರಾಜಕೀಯ ನಿವೃತ್ತಿ..!'

ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲಿಸುವುದೇ ನನ್ನ ಗುರಿ. ಇಲ್ಲವಾದರೆ ನಾನು ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಸಚಿವ ಶ್ರೀನಿವಾಸ್ ಪ್ರಸಾದ್ ಸವಾಲು ಹಾಕಿದ್ದಾರೆ. ನಾನು ಶೀಘ್ರದಲ್ಲೇ ಒಂದು ಪುಸ್ತಕ ಬರೆಯಲಿದ್ದು, ಅದರಲ್ಲಿ ಸಿದ್ರಾಮಯ್ಯನವರ ಬಗ್ಗೆ ವಿವರವಾಗಿ ದಾಖಲಿಸಲಿದ್ದೇನೆ ಎಂದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :332 ಸೋಮವಾರ ಅ.9, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಇಂದು 'ಮೀಟ್ ಟೆಕ್ನಾಲಜಿ' ಕಾಲೇಜು ಉದ್ಘಾಟನೆ

ಹಾಸನ : ಹಾಸನ ಸೇರಿದಂತೆ ರಾಜ್ಯದ 3 ಜಿಲ್ಲೆಗಳಲ್ಲಿ ಸೋಮವಾರ ದಿಂದಲೇ ಪಶು ವೈದ್ಯಕೀಯ ಡಿಪ್ಲೋಮಾ ಕಾಲೇಜುಗಳು ಪ್ರಾರಂಭವಾಗಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ, ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ಎ.ಮಂಜು ತಿಳಿಸಿದ್ದಾರೆ.

ನಗರದ ಅತಿಥಿ ಗೃಹದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಹಾಸನದ ಕೋರವಂಗಲದಲ್ಲಿ ಸೋಮವಾರ ಮಾಂಸ ತಯಾರಿಕಾ ತಂತ್ರಜ್ಞಾನ (ಮೀಟ್ ಟೆಕ್ನಾಲಜಿ)ಡಿಪ್ಲೋಮಾ ಕಾಲೇಜು ಉದ್ಘಾಟನೆಯಾಗಲಿದ್ದು, ಸಾರಿಗೆ ಸಚಿವ ಹೆಚ್.ಎಂ.ರೇವಣ್ಣ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದರು.

ಚಾಮರಾಜ ನಗರ ಮತ್ತು ಯಾದಗಿರಿ ಜಿಲ್ಲೆಗಳಲ್ಲೂ ಸೋಮವಾರ ದಿಂದಲೇ ಪ್ರತ್ಯೇಕ ಪಶು ವೈದ್ಯಕೀಯ ಡಿಪ್ಲೋಮಾ ಕೋರ್ಸ್‌ಗಳು ಪ್ರಾರಂಭವಾಗಲಿವೆ ಎಂದು ಹೇಳಿದರು.

ಮುಂದಿನ ವರ್ಷ ನಡೆಯಲಿರುವ ಮಹಾಮಸ್ತಕಾಭಿಷೇಕ ಕಾಮಗಾರಿ ವಿಳಂಬ ಕುರಿತಂತೆ ನಮ್ಮ ಮೇಲೆ ದೂರುಗಳನ್ನು ಮಾಡಲಾಗುತ್ತಿದೆ. ಈಗಾಗಲೇ 12 ಉಪ ನಗರ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಆಸ್ಪತ್ರೆ, ಗಾರ್ಡನ್ ಸೇರಿದಂತೆ ನಾನಾ ಕಾಮಗಾರಿಗಳಿಗೆ ಚಾಲನೆ ಕೊಡಲಾಗಿದೆ. ಅಗತ್ಯ ಎಲ್ಲಾ ಕೆಲಸಗಳು ಜನವರಿ ಎರಡನೇ ವಾರದೊಳಗೆ ಪೂರ್ಣಗೊಳ್ಳಲಿವೆ ಎಂದರು. *(-ಪುಟ 4ಕ್ಕೆ)*

> "ಬೇಲೂರು ತಾಲ್ಲೂಕಿನ ಹಳೇಬೀಡು, ಮಾದೀಹಳ್ಳಿ ಮತ್ತು ಜಾವಗಲ್‌ನ 40 ಕೆರೆಗಳಿಗೆ ನೀರು ತುಂಬಿಸುವ ನಿಟ್ಟಿನಲ್ಲಿ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ರಣಘಟ್ಟಕ್ಕೆ ನೀರು ಹರಿಸಲು ಕೆಲ ತಾಂತ್ರಿಕ ದೋಷ ಇದೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಈ ಕುರಿತು ಚರ್ಚೆ ಮಾಡಲಾಗುವುದು. ಪರ್ಯಾಯ ವ್ಯವಸ್ಥೆ ಕಂಡುಕೊಳ್ಳುವ ನಿಟ್ಟಿನಲ್ಲಿ ಯಗಚಿ ಅಣೆಕಟ್ಟೆಯಿಂದ ನೀರು ಹರಿಸುವುದು ಸೂಕ್ತ.
>
> -ಎ.ಮಂಜು
> *ಜಿಲ್ಲಾ ಉಸ್ತುವಾರಿ ಸಚಿವ*

ಜೋಳದ ಹೊಲದಲ್ಲಿ ಬೀಡು ಬಿಟ್ಟ ಎರಡು ಕಾಡಾನೆ

□ ಭಯಭೀತ ಮಲ್ಲಾಪುರ ಗ್ರಾಮಸ್ಥರು □ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಬೇಲೂರು: ಪಟ್ಟಣದಿಂದ ಸುಮಾರು 3 ಕಿಲೋ ಮೀಟರ್ ದೂರದಲ್ಲಿರುವ ಮಲ್ಲಾಪುರ ಕೊಪ್ಪಲು ಗ್ರಾಮದ ಜಮೀನಿನಲ್ಲಿ ಎರಡು ಕಾಡಾನೆಗಳು ಬೀಡು ಬಿಟ್ಟಿದ್ದು, ಜಮೀನಿನಲ್ಲಿದ್ದ ಬೆಳೆ ಸಾಕಷ್ಟು ನಾಶವಾಗಿದೆ ಎಂದು ಆರೋಪಿಸಿ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ ಘಟನೆ ಭಾನುವಾರ ನಡೆಯಿತು.

ಪಟ್ಟಣ ಸಮೀಪದ ಮಲ್ಲಾಪುರ ಕೊಪ್ಪಲು ಗ್ರಾಮದಲ್ಲಿ ಬೀಡು ಬಿಟ್ಟಿರುವ ಈ ಜೋಡಿ ಆನೆಗಳು ಬನ್ನೇರುಘಟ್ಟದಿಂದ ಬಂದಿರುವ ಶಂಕೆ ವ್ಯಕ್ತವಾಗುತ್ತಿದೆ. ಕಾರಣ ಪ್ರತಿ ವರ್ಷ ಇದೇ ಸಮಯದಲ್ಲಿ ಈ ಭಾಗಕ್ಕೆ ಪ್ರವಾಸ ಕೈಗೊಳ್ಳುವ ಈ ಆನೆಗಳು, ಕಳೆದ ಬಾರಿಯೂ ಇದೇ ರೀತಿಯಲ್ಲಿ ಈ ಗ್ರಾಮಗಳ ಸಮೀಪಕ್ಕೆ ಬಂದಿದ್ದವು. ಆ ಸಂದರ್ಭದಲ್ಲೂ ರೈತರ ಬೆಳೆಗಳಿಗೆ ಸಾಕಷ್ಟು ನಷ್ಟ ಸಂಭವಿಸಿತ್ತು. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಆನೆಗಳನ್ನು ರಾತ್ರಿ ಸಮಯದಲ್ಲಿ ಅವುಗಳು ಬಂದಿದ್ದ ದಾರಿಯೆಡೆಗೇ ಓಡಿಸಿದ್ದರು.

ಆದರೆ ಭಾನುವಾರ ಬೆಳಗ್ಗೆ 9 ಗಂಟೆ ಸಮಯದಲ್ಲಿ ಮಲ್ಲಾಪುರ ಗ್ರಾಮದ ಲೋಕೇಶ್ ಎಂಬುವವರು ಮಗನೊಂದಿಗೆ ತಮ್ಮ ಜಮೀನಿನ ಹತ್ತಿರದ ಶುಂಠಿ ಗದ್ದೆಗೆ ನೀರು ಹಾಯಿಸಲು ತೆರಳುತ್ತಿದ್ದ ಸಂದರ್ಭ ರಸ್ತೆಬದಿಯಲ್ಲಿಯೇ ಎರಡು ಬೃಹತ್ ಗಾತ್ರದ ಕಾಡಾನೆಗಳು ಕಾಣಿಸಿವೆ. ಈ ಆನೆಗಳನ್ನು ನೋಡಿದ ಲೋಕೇಶ್ ಸ್ಥಳದಲ್ಲೇ ಹೌಹಾರಿ ಮಗ ಅಭಿಷೇಕ್‌ನೊಂದಿಗೆ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ನಂತರ ವಾಪಸ್ ಗ್ರಾಮಕ್ಕೆ ಬಂದ ಲೋಕೇಶ್, ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿದ್ದಾರೆ.

ಆನೆಗಳು ಜೋಳ ಮತ್ತು ರಾಗಿ ಜಮೀನಿನಲ್ಲಿ ಓಡಾಡಿದ್ದರಿಂದಾಗಿ ರೈತರ ಸಾಕಷ್ಟು ಬೆಳೆ ಹಾನಿಗೊಂಡಿದೆ. *(-ಪುಟ 4ಕ್ಕೆ)*

ಸುಧಾರಣೆಯತ್ತ ನಗರ ಸರ್ಕಾರಿ 'ಹಿಮ್ಸ್' ದೊಡ್ಡಾಸ್ಪತ್ರೆ

ಹಾಸನ : ಹಾಸನ ವೈದ್ಯಕೀಯ ವಿಜ್ಞಾನಗಳ ಬೋಧಕ ಸಂಸ್ಥೆ ಮತ್ತು ಆಸ್ಪತ್ರೆ ಭವ್ಯ ಕಟ್ಟಡಗಳಲ್ಲಿ ಚಾಲನೆಗೊಂಡಿದೆ. ನಾಲ್ಕೈದು ಅಂತಸ್ತುಗಳಲ್ಲಿರುವ ಭಾರೀ ಕಟ್ಟಡಗಳಿಗೆ ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಹಿರಿಯ ವೈದ್ಯರ ಮಾರ್ಗದರ್ಶನದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಪ್ರತಿನಿತ್ಯ ಐದು ನೂರಕ್ಕೂ ಹೆಚ್ಚು ಮಂದಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದರೆ, ಸುಮಾರು 750ಕ್ಕೂ ಹೆಚ್ಚು ಮಂದಿ ಒಳ ರೋಗಿಗಳಾಗಿ ವೈದ್ಯಕೀಯ ಸೇವೆ ದಕ್ಕಿಸಿಕೊಳ್ಳುತ್ತಿದ್ದಾರೆ. ನಿತ್ಯ ಒಂದಲ್ಲಾ ಒಂದು ಸಮಸ್ಯೆ ಈ ದೊಡ್ಡಾಸ್ಪತ್ರೆಯಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಕಾರಣ-ಯಾರಿಗೂ ತಾಳ್ಮೆ ಇಲ್ಲದಿರುವುದು.

ಆಸ್ಪತ್ರೆಗೆ ಬರುವ ಹಾಗೂ ಆಸ್ಪತ್ರೆಯಲ್ಲಿ ಒಳ ರೋಗಿಗಳಾಗಿರುವವರ ಸಹಾಯಕರು ಮತ್ತು ಬಂಧು ಬಳಗದವರು ತಾಳ್ಮೆಯಿಂದ ವರ್ತಿಸಬೇಕೆನ್ನುವ ನಾಮಫಲಕಗಳನ್ನು ಗೋಡೆಗಳ ಮೇಲೆ ಬರೆಸಲಾಗಿದೆ. ಹಾಗೆಯೇ ಆಸ್ಪತ್ರೆ ಭದ್ರತಾ ಸಿಬ್ಬಂದಿಗಳು ಕೂಡ ತಾಳ್ಮೆಯಿಂದ ವರ್ತಿಸಲೇಬೇಕೆನ್ನುವುದೂ ಕೂಡ ಕಡ್ಡಾಯವಾಗಬೇಕಿದೆ.

ಆಸ್ಪತ್ರೆಗೆ ಬರುವ ಮತ್ತು ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳ ಸಂಬಂಧಿಕರು ಬಹುತೇಕ ಆತಂಕದಲ್ಲಿರುತ್ತಾರೆ ಎನ್ನುವುದೂ ಸತ್ಯವೇ. ವಿನಾಕಾರಣ ಭದ್ರತಾ ಸಿಬ್ಬಂದಿ ಮತ್ತು ರೋಗಿಗಳ ಸಂಬಂಧಿಕರು ಪರಸ್ಪರ ಜಗಳ ಮಾಡಿಕೊಳ್ಳುವುದು ನಿಲ್ಲಬೇಕೆಂದರೆ, ಪರಸ್ಪರ ಸಂಯಮದಿಂದ ಎರಡೂ ಕಡೆಯವರು ಆಲೋಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ಭದ್ರತಾ ಸಿಬ್ಬಂದಿಗಳಿಗೆ ಮಾಹಿತಿ ಒದಗಿಸಿ ಅವರಿಗೆ ಸಂಯಮದಿಂದ ವರ್ತಿಸುವುದರ ಕುರಿತಂತೆ ತರಬೇತಿ ನೀಡುವುದೂ ಆಗಬೇಕಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ 'ಜನತಾ ಮಾಧ್ಯಮ' ಪತ್ರಿಕೆ ಈ ದೊಡ್ಡಾಸ್ಪತ್ರೆಗೆ ಭೇಟಿ ನೀಡಿತ್ತು. ವಾರ್ಡ್‌ನಲ್ಲಿರುವ ಕೆಲವು ರೋಗಿಗಳನ್ನು ಕಂಡು ಮಾತನಾಡಿಸಿತು.

ಡೆಂಗ್ಯೂ ಜ್ವರ ಪೀಡಿತ ಗುಂಡೇಗೌಡನ ಕೊಪ್ಪಲಿನ ಅರುಣ್ ಅಭಿಪ್ರಾಯಪಡುವಂತೆ, ಒಂದು ರೀತಿಯಲ್ಲಿ ಅನುಕೂಲವೇ ಆಗಿದೆಯಂತೆ. ಐದು ದಿನಗಳಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರಂತೆ. ರೋಗಿಗಳ ಸಂಖ್ಯೆ ಭಾರೀ ಹೆಚ್ಚಳವಾಗಿದ್ದು, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವೈದ್ಯರು ಮತ್ತು ಸಿಬ್ಬಂದಿ ನೇಮಕವಾಗಬೇಕಂತೆ. ರೋಗಿಗಳಿಗೆ ಸಹಾಯಕರಿದ್ದರೆ ಮಾತ್ರ ಅವರು ಓಡಾಡಿ ಕೆಲಸ ಮಾಡಿಕೊಳ್ಳಬಹುದಂತೆ.

ಇದ್ದುದರಲ್ಲಿ ಪರವಾಗಿಲ್ಲ. ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಸ್ವಲ್ಪ ಸುಧಾರಿಸಿದಂತೆ ಕಾಣುತ್ತಿದೆ. ಬಡವರು ಮತ್ತು ಮಧ್ಯಮ ವರ್ಗದವರಿಗೆ ಈ ದೊಡ್ಡಾಸ್ಪತ್ರೆ ಕೈಗೆಟುಕುತ್ತದೆ ಎನ್ನುತ್ತಾರೆ ರೋಗಿ ಅರುಣ್.

ಬೇಲೂರು ತಾಲ್ಲೂಕಿನ ಮಲ್ಲಪ್ಪನ ಹೊಸಳ್ಳಿ ರವಿ ಈ ಕೆಳಕಂಡಂತೆ ಅಭಿಪ್ರಾಯಪಡುತ್ತಾರೆ.

ಆಶಾ ಕಾರ್ಯಕರ್ತೆಯರ ವರ್ತನೆ ಸ್ವಲ್ಪ ಸುಧಾರಿಸಬೇಕು. ಬಿಲ್ಲಿಂಗ್ ಕೌಂಟರ್‌ಗಳು ಹೆಚ್ಚಳವಾಗಬೇಕು ಎಂದು ರವಿ ಹೇಳಿದರೆ, ರೋಗಿಗಳನ್ನು ದಾದಿಯರು ನಿಗಾದಿಂದ ನೋಡಬೇಕು. ವೈದ್ಯರ ಸಂಖ್ಯೆ ಹೆಚ್ಚಾಗಬೇಕು ಎನ್ನುತ್ತಾರೆ ನಿಟ್ಟೂರಿನ ಮಂಜೇಗೌಡ.

ಅಪಘಾತದಲ್ಲಿ ಗಾಯಾಳುವಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ಅಡಗೂರು ವಿನೋದ್ ಕುಮಾರ್ ಅವರು ಮಾತನಾಡಿ, ಪ್ರಭಾವ ಮತ್ತು ಪರಿಚಯ ಇದ್ದಲ್ಲಿ ಈ ಆಸ್ಪತ್ರೆಯಲ್ಲಿ ದಾಖಲಾಗಬಹುದು. ಇಲ್ಲದಿದ್ದಲ್ಲಿ ಸ್ವಲ್ಪ ಕಷ್ಟವೇ ಎಂದರು. ಅಗತ್ಯ ಸೌಲಭ್ಯಗಳಿಗೇನು ಕೊರತೆಯಿಲ್ಲ. ಆದರೆ ತಮಗೆ ಅಪಘಾತವಾದ ದಿನ ಈ ಸರ್ಕಾರಿ ಆಸ್ಪತ್ರೆಗೆ ಬಂದಾಗ ಖಾಸಗಿ ಆಸ್ಪತ್ರೆಗೆ ಹೋಗುವಂತೆ ತಿಳಿಸಿದ್ದರು. ಅವರ ಮಾತು ಕೇಳಿದ್ದರೆ ನನ್ನ ಹೆಂಡತಿ ಕೊರಳಲ್ಲಿರುವ ಚಿನ್ನದ ಸರವನ್ನು ಕಳೆದುಕೊಳ್ಳಬೇಕಿತ್ತು ಎಂದು ವಿಷಾದಿಸಿದರು. *(-ಪುಟ 4ಕ್ಕೆ)*

'ಸರ್ಕಾರದ ಸಾಧನೆ' ಜನರಿಗೆ ತಲುಪಿಸಿ

ಜಾವಗಲ್: ಕಾಂಗ್ರೆಸ್ ಸರ್ಕಾರದ ಸಾಧನೆಗಳ ಬಗ್ಗೆ ಪ್ರತಿ ಹಳ್ಳಿ ಹಳ್ಳಿಗಳ ಮನೆಗಳಿಗೆ ತೆರಳಿ ಜನರಿಗೆ ಮನಮುಟ್ಟುವಂತೆ ತಲುಪಿಸುವುದು ಕಾಂಗ್ರೆಸ್ ಮುಖಂಡರ ಕೆಲಸವಾಗಿರುತ್ತದೆ ಎಂದು ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಬಿ.ಶಿವರಾಂ ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್ ಆವರಣದಲ್ಲಿ ಭಾನುವಾರ ಏರ್ಪಡಿಸಿದ್ದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯಕ್ಕೆ ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರ ಪ್ರಥಮ ಆದ್ಯತೆ ನೀಡುತ್ತಿದ್ದು, ಬಸವಣ್ಣನವರ ನುಡಿದಂತೆ ನಡೆಯುವ ಸಂಕಲ್ಪ ತೊಟ್ಟು ಅದರಂತೆ ನಮ್ಮ ಸರ್ಕಾರ ನಡೆಯುತ್ತಿದೆ. ಸಮಾಜದಲ್ಲಿ ಅವಕಾಶ ವಂಚಿತರಾದ ಜನತೆಯ ಒಳಿತಿಗಾಗಿ ನಮ್ಮ ಸರ್ಕಾರ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಅನ್ನ ಭಾಗ್ಯ, ಕೃಷಿ ಭಾಗ್ಯದಂತಹ ಯೋಜನೆಗಳು ಬಡವರ ಬದುಕಿನಲ್ಲಿ ಭರವಸೆಗಳನ್ನು ಮೂಡಿಸಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ವಿದೇಶಿ ಬ್ಯಾಂಕ್‌ಗಳಲ್ಲಿರುವ ಕಪ್ಪು ಹಣವನ್ನು ತಂದು ದೇಶದ ಪ್ರತಿಯೊಬ್ಬ ಪ್ರಜೆಯ ಬ್ಯಾಂಕ್ ಖಾತೆಗೆ ತಲಾ ರೂ.15 ಲಕ್ಷ ಜಮಾ ಮಾಡುವುದಾಗಿ ಹೇಳಿದ್ದು, ಇದುವರೆಗೂ ಅದರ ಸುಳಿವೇ ಇಲ್ಲ. ಕಪ್ಪು ಹಣ ಇಟ್ಟುಕೊಂಡವರು ವಿದೇಶಕ್ಕೆ ಪರಾರಿಯಾಗಲು ಬಿಜೆಪಿ ದಾರಿ ಮಾಡಿಕೊಟ್ಟಿದೆ ಎಂದು ಟೀಕಿಸಿದರು.

ಸಭೆಯಲ್ಲಿ ಜಿ.ಪಂ. ಸದಸ್ಯೆ ಲೋಲಾಕ್ಷಮ್ಮ ಮಹದೇವಪ್ಪ, ತಾಲ್ಲೂಕು ಪಂಚಾಯಿತಿ ಸದಸ್ಯ ಜೆ.ಕೆ. ಪ್ರಭಾಕರ, ಕಿಸಾನ್ ಕೇತ್ ಮಜದೂರ್ ಕಾಂಗ್ರೆಸ್ ಹೋಬಳಿ ಅಧ್ಯಕ್ಷ ಚಂದ್ರಪ್ಪ, ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಬೆಳವಳ್ಳಿ ಮಹದೇವಪ್ಪ ಇನ್ನಿತರರು ಪಾಲ್ಗೊಂಡಿದ್ದರು.

ಅಡುಗೆಗೆ ಮಳೆ ನೀರು ಬಳಕೆಯಿಂದ ಆರೋಗ್ಯ ವೃದ್ಧಿ

ಹಾಸನ: ಮಳೆಯು ಇಳೆಗೆ ದೇವರು ಕೊಟ್ಟ ವರ. ಅದನ್ನು ಸದುಪಯೋಗಪಡಿಸಿಕೊಂಡಾಗ ಪರಿಸರದ ಉಳಿವು ಸಾಧ್ಯ ಎಂದು ಹಾಸನ ಆಕಾಶವಾಣಿ ಕೃಷಿ ವಿಭಾಗದ ಮುಖ್ಯಸ್ಥ ಡಾ. ವಿಜಯ ಅಂಗಡಿ ಹೇಳಿದರು.

ನಗರದ ಶ್ರೀಮತಿ ಬಿಳಿಯಮ್ಮ ಈರೇಗೌಡ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾನುವಾರ ನಡೆದ ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಳೆ ನೀರು ಕೊಯ್ಲು ಮತ್ತು ಸಂಗ್ರಹ ವ್ಯವಸ್ಥೆಯಿಂದ ನೀರಿನ ಕೊರತೆ ಸಮಸ್ಯೆ ನಿವಾರಿಸಬಹುದಾಗಿದೆ ಎಂದರು.

ಪರಿಸರಮಾಲಿನ್ಯದಿಂದಾಗಿ ಇಂದು ಕೊಳವೆ ಬಾವಿಗಳ ನೀರು ಸಹ ಕಲುಷಿತಗೊಂಡಿದೆ. ನಾವು ಇಂದು ಎದುರಿಸುತ್ತಿರುವ ಅನೇಕ ರೋಗಗಳಿಗೆ ನೀರೇ ಕಾರಣ. ಮಳೆ ನೀರು ಸಂಗ್ರಹದಿಂದ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಮಳೆ ನೀರು ರೋಗ ನಿರೋಧಕ ಶಕ್ತಿ ಹೊಂದಿದ್ದು, ಅನೇಕ ಜೀವಸತ್ವಗಳಿಂದ ಕೂಡಿರುತ್ತದೆ. ಆದ್ದರಿಂದ ಮಳೆ ನೀರನ್ನು ಸಂಗ್ರಹಿಸಿ ಉಪಯೋಗಿಸಬೇಕು ಎಂದು ಸಲಹೆ ಮಾಡಿದರು.

ಮಳೆ ನೀರಿನಿಂದ ತಯಾರಿಸಿದ ಆಹಾರ ತುಂಬಾ ರುಚಿಯಾಗಿರುತ್ತದೆ. ಮಳೆ ನೀರಿನಲ್ಲಿ ಸ್ನಾನ ಮಾಡುವುದರಿಂದ ಮತ್ತು ಬಟ್ಟೆಗಳನ್ನು ಒಗೆಯುವುದರಿಂದ ನಮ್ಮ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು.

ಇಂದಿನ ಯುವ ಜನರು ಮೊಬೈಲ್ ಬಳಕೆಯ ದಾಸರಾಗುತ್ತಿದ್ದು, ಸಮಾಜ ಮತ್ತು ದೇಶದ ಬೆಳವಣಿಗೆಯಲ್ಲಿ ಅವರ ಪಾತ್ರ ನಗಣ್ಯವಾಗುತ್ತಿದೆ. ದುಶ್ಚಟಗಳಿಂದ ದೂರವಿದ್ದು, ಉತ್ತಮ ಬದುಕು ರೂಪಿಸಿಕೊಳ್ಳುವುದರ ಜೊತೆಗೆ ದೇಶದ ಪ್ರಗತಿಗೂ ಕೊಡುಗೆ ನೀಡಬೇಕು ಎಂದು ತಿಳಿ ಹೇಳಿದರು. *(-ಪುಟ 4ಕ್ಕೆ)*

ಅಕ್ರಮ ಮರಳು ಸಾಗಣೆ: ವಾಹನ ಸಹಿತ ಒಬ್ಬನ ಸೆರೆ

ಸಕಲೇಶಪುರ : ಕಸಬಾ ಹೋಬಳಿ ಇರಗಲು ಗ್ರಾಮದ ಹತ್ತಿರದಿಂದ ದೋಣಿಗಾಲ್ ಗ್ರಾಮದ ಕಡೆಗೆ ಅಕ್ರಮವಾಗಿ ಮರಳನ್ನು ಸಾಗಿಸುತ್ತಿದ್ದಾಗ ವಾಹನ ತಡೆದು ಚಾಲಕ ದಿನೇಶ್ ಎಂಬಾತನನ್ನು ಬಂಧಿಸಿ ಮರದ ಸಮೇತ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವ ಘಟನೆ ಭಾನುವಾರ ಬೆಳಿಗ್ಗೆ 5.30ರಲ್ಲಿ ನಡೆದಿದೆ.

ಆನೆಮಹಲ್ ಗ್ರಾಮದ ಬಸ್ ನಿಲ್ದಾಣದ ಎದುರು ಭಾನುವಾರ ಬೆಳಿಗ್ಗೆ ಹೋಗುತ್ತಿದ್ದ ಕೆ.ಎ.19-ಡಿ.2523 ಪಿಕಪ್ ವಾಹನವನ್ನು ತಡೆದು ಪರಿಶೀಲಿಸಲಾಗಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದುದು ಪತ್ತೆಯಾಯಿತು.

ಇರಗಲು ಗ್ರಾಮದ ಚಾಲಕ ದಿನೇಶ್ (27) ಎಂಬಾತನನ್ನು ಬಂಧಿಸಿ ವಾಹನ ಮುಟ್ಟುಗೋಲು ಹಾಕಿಕೊಂಡಿರುವ ಸಕಲೇಶಪುರ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಭಿವೃದ್ಧಿ ನಿರ್ಲಕ್ಷ್ಯಿಸಿ ಅಕ್ರಮ ಸಂಪಾದನೆಯಲ್ಲಿ ಸಚಿವ ಮಂಜು

ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಶಾಸಕ ಎ.ಟಿ.ಆರ್. ಆರೋಪ

ಅರಕಲಗೂಡು : ಜಿಲ್ಲಾ ಉಸ್ತುವಾರಿ ಸಚಿವರು ಅಭಿವೃದ್ಧಿಯನ್ನು ನಿರ್ಲಕ್ಷಿಸಿ ಚುನಾವಣೆಗಾಗಿ ಅಕ್ರಮ ಸಂಪಾದನೆಯಲ್ಲಿ ತೊಡಗಿದ್ದಾರೆ ಎಂದು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಆರೋಪಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಶು ಸಂಗೋಪನೆ ಸಚಿವರ ಕ್ಷೇತ್ರದಲ್ಲಿಯೇ ಯೋಜನೆ ದುರುಪಯೋಗವಾಗುತ್ತಿದ್ದು, ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ. ಹಣದಾಹದಿಂದ ಸಚಿವರ ಕ್ಷೇತ್ರದಲ್ಲಿ ಯೋಜನೆ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ನಡೆದ ಅಕ್ರಮದಲ್ಲಿ ಅಧಿಕಾರಿಗಳ ಕೈವಾಡವಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಿದ್ದ ಸಚಿವರು, ಈಗ ಅವರ ವಿರುದ್ಧವೇ ದೂರು ದಾಖಲಿಸುವ ಹುನ್ನಾರಕ್ಕೆ ಮುಂದಾಗಿದ್ದಾರೆ. ಚುನಾವಣೆ ಗಿಮಿಕ್ ಮಾಡುವುದನ್ನು ಸಚಿವರು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಮುದಗನೂರು ಕ್ರಷರ್‌ಗೆ ಗಣಿ ಮಂತ್ರಿ ವಿನಯ ಕುಲಕರ್ಣಿ ದಿಢೀರ್ ಭೇಟಿ ನೀಡಿದ್ದರ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ಬಂದಿಲ್ಲವೇ? ಈ ಬಗ್ಗೆ ಅನುಮಾನವಿದ್ದು, ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಕೋಟಿಗಟ್ಟಲೆ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಹಾಸನ-ಪಿರಿಯಾಪಟ್ಟಣ ಮಾರ್ಗದ ರಸ್ತೆ ಉದ್ಘಾಟನೆಗೂ ಮುನ್ನವೇ ಕಳಪೆಯಾಗಿ ಹಾಳಾಗುತ್ತಿದೆ. ಈ ಬಗ್ಗೆ ಸಚಿವರು ಗುತ್ತಿಗೆದಾರರನ್ನು ಯಾಕೆ ಕೇಳುತ್ತಿಲ್ಲ ಎಂದು ಪ್ರಶ್ನಿಸಿದರು.

ವಸತಿ ಯೋಜನೆ ಸೇರಿದಂತೆ ಸರ್ಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಿಗುತ್ತಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಬಡವರನ್ನು ಸುಲಿಗೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಜನಸಾಮಾನ್ಯರಿಗೆ ಸ್ಪಂದಿಸದೆ ಉದ್ಯಮಿಗಳನ್ನು ಬೆಂಬಲಿಸುತ್ತಿದೆ. ಹಾಗಾಗಿ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಅನ್ನು ಬೆಂಬಲಿಸಬೇಕು ಎಂದು ಕೋರಿದರು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಆಲೂರು-ಸಕಲೇಶಪುರ ಶಾಸಕ ಎಚ್.ಕೆ.ಕುಮಾರಸ್ವಾಮಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆಳ್ವಿಕೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ಮಿತಿ ಮೀರಿದೆ. *(-4ನೇ ಪುಟಕ್ಕೆ)*

ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದ ದೊಡ್ಡಕೊಂಡಗುಳ

ಹಸಿರು ಭೂಮಿ ಪ್ರತಿಷ್ಠಾನದೊಂದಿಗೆ ಕೈ ಜೋಡಿಸಿದ ಗ್ರಾಮಸ್ಥರು : ಉಕ್ಕಿದ ಜೀವಜಲ

ಹಾಸನ : ಆ ಊರಿನ ಯುವಕರು ಹುಟ್ಟಿದ ಊರಿನ ಮಣ್ಣಿನ ಋಣವನ್ನು ಕಿಂಚಿತ್ತಾದರೂ ತೀರಿಸುತ್ತಿದ್ದಾರೆ. ಬಿಸಿಲು, ಮಳೆ, ಚಳಿ, ಕೊಳೆ, ಕೆಸರೆನ್ನದೆ, ರೋಗ ರುಜಿನ, ಜೀವದ ಹಂಗು ತೊರೆದು ಹುಟ್ಟೂರ ಸೇವೆ ಮಾಡುತ್ತಿದ್ದಾರೆ. ಊರಿನ ಗ್ರಾಮಸ್ಥರು ಹಾಗೂ ಹಸಿರು ಭೂಮಿ ಪ್ರತಿಷ್ಠಾನದವರು ಕೂಡ ಆ ಊರ ಉನ್ನತಿಗೆ ಕೈ ಜೋಡಿಸಿ ಸದ್ದಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಈ ಪರಿಣಾಮ ದೊಡ್ಡಕೊಂಡಗುಳ ಗ್ರಾಮದಲ್ಲಿ ಗಂಗೆ ನಲಿದಾಡುತ್ತಿದ್ದಾಳೆ. ಜೀವಜಲ ಜನ, ಜಾನುವಾರುಗಳ ದಾಹ ತೀರಿಸುತ್ತಿದೆ.

ಹಾಸನ ನಗರದಿಂದ ಅನತಿ ದೂರದಲ್ಲಿರುವ ದೊಡ್ಡಕೊಂಡಗುಳ ಗ್ರಾಮ ಕಳೆದ ಐದಾರು ತಿಂಗಳ ಹಿಂದೆ ಸ್ವಚ್ಛತೆ ಇಲ್ಲದೆ, ಕೆರೆ ಕಟ್ಟೆ, ಕಲ್ಯಾಣಿಗಳಿದ್ದರೂ ನೀರಿಲ್ಲದೆ ಕುಗ್ರಾಮದಂತಿತ್ತು. ಜೀವಜಲಕ್ಕೆ ಹಾಹಾಕಾರ ಉಂಟಾಗಿತ್ತು. *(-ಪುಟ 4ಕ್ಕೆ)*

> "ಕಳೆದ ಮೇ ತಿಂಗಳಿಂದ ಆರಂಭವಾದ ಶ್ರಮದಾನ ಇಂದಿಗೂ ಮುಂದುವರೆದಿದೆ. ಪ್ರತಿ ಭಾನುವಾರ ಈ ಗ್ರಾಮದಲ್ಲಿ ಎಲ್ಲರೂ ಒಗ್ಗಟ್ಟಾಗಿ ಸೇವೆ ಮಾಡುತ್ತಿರುವುದರಿಂದ ಕಲ್ಯಾಣಿಗಳು ತುಂಬಿವೆ. ಕೆರೆಯಲ್ಲಿ ಏಳೆಂಟು ಅಡಿ ತಿಳಿ ನೀರು ತುಂಬಿದೆ. ನಮ್ಮ ಸೇವೆ ನಿರಂತರ.
>
> -ಪುಟ್ಟಯ್ಯ
> ಹಸಿರು ಭೂಮಿ ಪ್ರತಿಷ್ಠಾನ

> "ಹಸಿರು ಭೂಮಿ ಪ್ರತಿಷ್ಠಾನ ಹಾಗೂ ನಮ್ಮೂರ ಯುವಕರ, ಗ್ರಾಮಸ್ಥರ ನಿಸ್ವಾರ್ಥ ಸೇವೆ, ಪರಿಶ್ರಮದಿಂದ ಯಾವುದೇ ಸರ್ಕಾರದ ನೆರವಿಲ್ಲದೇ ನಮ್ಮೂರಿನಲ್ಲಿ ಸ್ವಚ್ಛತಾ ಕಾರ್ಯ, ಕೆರೆ ಕಲ್ಯಾಣಿ ಹೂಳೆತ್ತಿದ್ದು, ಗ್ರಾಮ ಅಭಿವೃದ್ಧಿಯತ್ತ ಸಾಗುತ್ತಿದೆ. ಇದು ಸಾರ್ಥಕವಾಗಿ ತೃಪ್ತಿತಂದಿದೆ. -ವಾಸು, ಗ್ರಾ.ಪಂ. ಸದಸ್ಯ

□ ಬತ್ತಿಹೋಗಿದ್ದ ಕೆರೆ, ಕಲ್ಯಾಣಿಗಳಲ್ಲಿ ಜಲರಾಶಿ

□ ಜನ ಜಾನುವಾರುಗಳ ದಾಹ ನೀಗಿಸುತ್ತಿರುವ ಜೀವಜಲ

□ ಹಸಿರು ಭೂಮಿ ಪ್ರತಿಷ್ಠಾನ, ದೊಡ್ಡ ಕೊಂಡಗುಳ ಗ್ರಾಮಸ್ಥರು, ಯುವಕರ ಪರಿಶ್ರಮಕ್ಕೆ ತಕ್ಕ ಪ್ರತಿಫಲ

□ ಕೆರೆ ಕಲ್ಯಾಣಿ ಹೂಳೆತ್ತಿದ್ದರಿಂದ ತೆರೆದ ಜಲದ ಕಣ್ಣು

□ ಪ್ರತಿ ಭಾನುವಾರ ಯುವಕರ ನಿರಂತರ ಶ್ರಮದಾನ

□ ಇತರರಿಗೆ ಮಾದರಿಯಾದ ಕೊಂಡಗುಳ ಯುವಕರು

ಬೋನಿಗೆ ಬಿದ್ದ ಗಂಡು ಚಿರತೆ

ಗಂಡಸಿ ಹೋಬಳಿಯ ಕೆಂಕೆರೆ ಗ್ರಾಮದ ಬಳಿ ಸೆರೆ

ಅರಸೀಕೆರೆ : ಕಳೆದ ಕೆಲ ದಿನಗಳಿಂದ ತಾಲ್ಲೂಕಿನ ಗಂಡಸಿ ಹೋಬಳಿ ಕೆಂಕೆರೆ ಗ್ರಾಮದ ಸುತ್ತಮುತ್ತಲ ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದ್ದ ಗಂಡು ಚಿರತೆಯೊಂದು ಶನಿವಾರ ರಾತ್ರಿ ಬೋನಿಗೆ ಬಿದ್ದಿದ್ದು, ಜನರು ನಿಟ್ಟುಸಿರು ಬಿಡುವಂತಾಗಿದೆ.

ಕೆಂಕೆರೆ ಗ್ರಾಮದ ಸುತ್ತಮುತ್ತ ಕಾಣಿಸಿಕೊಳ್ಳುತ್ತಿದ್ದ ಚಿರತೆ, ಕುರಿಗಳನ್ನು ಬಲಿ ತೆಗೆದುಕೊಳ್ಳುತ್ತಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಗ್ರಾಮಸ್ಥರ ಮನವಿಗೆ ಓಗೊಟ್ಟ ಅರಣ್ಯ ಇಲಾಖೆ ಅಧಿಕಾರಿಗಳು, ಸೂಕ್ತ ಸ್ಥಳದಲ್ಲಿ ಚಿರತೆ ಸೆರೆ ಹಿಡಿಯಲು ಬೋನು ಇಟ್ಟು 3-4 ದಿನಗಳಿಂದ ಕಾಯುತ್ತಿದ್ದರು. ಶನಿವಾರ ರಾತ್ರಿ ಬೋನಿಗೆ ಎರಡು ವರ್ಷ ಪ್ರಾಯದ ಗಂಡು ಚಿರತೆ ಬಿದ್ದಿದ್ದು, ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ. ಸದ್ಯ ಚಿರತೆ ಅರಣ್ಯ ಇಲಾಖೆ ಅಧಿಕಾರಿಗಳ ವಶದಲ್ಲಿದ್ದು, ಮೇಲಾಧಿಕಾರಿಗಳ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ವಲಯ ಅರಣ್ಯ ಅಧಿಕಾರಿ ರಾಜಾನಾಯಕ್ ಸುದ್ದಿಗಾರರಿಗೆ ತಿಳಿಸಿದ್ದಾರೆ.